**OS No. 71/2019**

**ಪಿಡಬ್ಲೂ -1**

**ಸಾಕ್ಷಿಯನ್ನು ದಿನಾಂಕಃ 24-07-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟಿ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಎ ಕೆ ವಕೀಲರಿಂದ.**

ನನ್ನ ತಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಂಡು 12 ವರ್ಷಗಳು ಆಗಿರುತ್ತದೆ. ನನ್ನ ತಂದೆ ಬ್ಯಾಂಕ ಆಫ್ ಮಹಾರಾಷ್ಟ್ರ ಬ್ಯಾಂಕಿನಲ್ಲಿ ಅಟೆಂಡರ ಆಗಿ ಬಿಜಾಪೂರದಲ್ಲಿ ಕೆಲಸ ಮಾಡುತ್ತಿರುತ್ತಾನೆ. ನನ್ನ ತಂದೆ ಕೆಮ್ಮಣಗಿಯಲ್ಲಿ ತೀರಿಕೊಂಡಿರುತ್ತಾನೆ. ನನ್ನ ತಂದೆ ಬಿಜಾಪೂರದಲ್ಲಿ ಸುಮಾರು 40 ವರ್ಷ ಇದ್ದರು. ಅಲ್ಲಿ ಮನೆ ತೆಗೆದುಕೊಂಡಿರುವುದಿಲ್ಲ. ನನ್ನ ತಾಯಿ ತೀರಿಕೊಂಡಿರುತ್ತಾಳೆ. ನನ್ನ ಎಲ್ಲಾ ವಿದ್ಯಾಭ್ಯಾಸ ಬಿಜಾಪೂರದಲ್ಲಿ ಆಗಿರುತ್ತದೆ. ನಾನು ಎಸ್ ಎಸ್ ಎಲ್ ಸಿ ಬಿಜಾಪೂರದಲ್ಲಿ ಓದಿ 30-35 ವರ್ಷಗಳ ಕಾಲ ಅಲ್ಲೆ ಇದ್ದೇನು. ಈಗ ನಾನು ಸುರಪೂರದ ಉದ್ದಾರ ಓಣಿಯಲ್ಲಿ ಇರುತ್ತೇನೆ. ಸದರಿ ಓಣಿಯಲ್ಲಿ 15 ವರ್ಷಗಳಿಂದ ಇರುತ್ತೇನೆ.

2. ನನಗೆ ದಾವಾ ಆಸ್ತಿ ಸರ್ವೆ ನಂಬರ ಗೊತ್ತಿರುತ್ತದೆ. ಸದರಿ ಸರ್ವೆ ನಂ.101 ಮತ್ತು 102 ಇರುತ್ತದೆ. ಸರ್ವೆ ನಂ.101 ಕ್ಷೇತ್ರ 4 ಎಕರೆ ಚಿಲ್ಲರ ಇರುತ್ತದೆ. ಸರ್ವೆ ನಂ.102 ಕ್ಷೇತ್ರ 3 ಎಕರೆ ಚಿಲ್ಲರೆ ಇರುತ್ತದೆ. ಸರ್ವೆ ನಂ.101 ಪೂರ್ವ ದಿಕ್ಕಿಗೆ ಇರುತ್ತದೆ. ಸರ್ವೆ ನಂ.101 ರ ಪಶ್ಚಿಮ ದಿಕ್ಕಿಗೆ 102 ಇರುತ್ತದೆ. ಸರ್ವೆ ನಂ.101 ರ ಪೂರ್ವ ದಿಕ್ಕಿಗೆ ಈಗ ಯಾರ ಜಮೀನು ಇದೆ ಎಂದು ನನಗೆ ಗೊತ್ತಿರುವುದಿಲ್ಲ. ಪಶ್ಚಿಮಕ್ಕೆ ರೆಡ್ಡಿಯರ ಹೊಲ ಇರುತ್ತದೆ, ಆದರೆ ಅವರ ಹೆಸರು ಗೊತ್ತಿರುವುದಿಲ್ಲ. ಉತ್ತರಕ್ಕೆ ಶಿವಪ್ಪ ದಳಪತಿ ಇವರ ಜಮೀನು ಇರುತ್ತದೆ ಮತ್ತು ದಕ್ಷಿಣಕ್ಕೆ - ರೆಡ್ಡಿಯರ ಹೊಲ ಇರುತ್ತದೆ, ಅವರ ಹೆಸರು ಗೊತ್ತಿರುವುದಿಲ್ಲ.

3. ನ್ಯಾಯಾಲಯದಲ್ಲಿ ಕುಳಿತಿರುವ ಮಹಿಳೆ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.102 ರ ಪೂರ್ವಕ್ಕೆ-ಹೊಳೆ ಬರುತ್ತದೆ. ಪಶ್ಚಿಮಕ್ಕೆ-ರೆಡ್ಡಿಯರ ಜಮೀನುಗಳು ಬರುತ್ತದೆ, ಸದರಿಯವರ ಹೆಸರು ನನಗೆ ಗೊತ್ತಿರುವುದಿಲ್ಲ. ಉತ್ತರಕ್ಕೆ-ದಳಪತಿ ಮತ್ತು ನಿಂಗಪ್ಪ ಗೌಡ ಮೇಟಿ ಇವರ ಹೊಲಗಳು ಬರುತ್ತವೆ. ದಕ್ಷಿಣಕ್ಕೆ-ಕೆನಾಲ ರಸ್ತೆ ಇರುತ್ತದೆ.

4. ನಾನು 1 ನೇ ವಾದಿಯನ್ನು ನೋಡಿರುವುದಿಲ್ಲ. ವಾದಿಗಳ ಮನೆ ಹೆಸರು ಜಾಗಿರದಾರ ಇರುತ್ತದೆ. ನಾನು ದಾವಾ ಅಸ್ತಿಯ ಪಹಣೆಗಳನ್ನು ನೋಡಿರುತ್ತೇನೆ. ಸದರಿ ಪಹಣಿಗಳಲ್ಲಿ ಜಾಗಿರದಾರರು ಎಂದು ಬರೆದಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅಂಬುಜಮ್ಮ ಗುಂಡಾಚಾರಿ ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. ವಾದಿಯ ಅಡ್ಡ

ಹೆಸರು ಜಾಗಿರದಾರ ಎಂದು ಕರೆಯುತ್ತಾರೆ ಎನ್ನುವ ದಾಖಲೆಗಳನ್ನು ನಾನು ನೋಡಿರುವುದಿಲ್ಲ.

5. ರಾಮಪ್ಪನಾಯಕ ಸುಮಾರು 18 ವರ್ಷಗಳ ಹಿಂದೆ ತೀರಿಕೊಂಡಿರುತ್ತಾನೆ. ಸತ್ಯಬಾಬು ತಂದೆ ಲಕ್ಷ್ಮಣ ಎನ್ನುವವರು ಗೊತ್ತಿರುತ್ತದೆ. ಸತ್ಯಬಾಬು ತಂದೆ ಲಕ್ಷ್ಮಣ ಇವರು ಜಮೀನ ಸರ್ವೆ ನಂ.101 ಮತ್ತು 102 ನ್ನು ಜಾನ್ಸಿಲಕ್ಷ್ಮೀ ಇವರಿಂದ ಜಮೀನನ್ನು ಮಾಡುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಸಾಕ್ಷಿ ನುಡಿಯಲು ರಾಮಪ್ಪ ನಾಯಕ ಮತ್ತು ಮುರಳಿಧರರಾವ್ ಹೇಳಿರುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲದಿದ್ದರೂ ಮತ್ತು ನಾನು ಎಮ್ಮಡಿ ಗ್ರಾಮದಲ್ಲಿ ಇಲ್ಲದೆ ಇದ್ದರೂ ಸಹಿತ ನಾನು ಪಿಡಬ್ಲೂ-2 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಡಬ್ಲೂ-2 ರವರು ಕೊಡುವ ದುಡ್ಡಿನ ಆಸೆಗಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಏನೂ ಗೊತ್ತಿಲ್ಲದೆ ಇದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿ ಸರ್ವೆ ನಂ.101 ಮತ್ತು 102 ರ ಮಾಲೀಕ ಮತ್ತು ಕಬ್ಜೆದಾರ 2 ನೇ ಪ್ರತಿವಾದಿಯೇ ಇರುತ್ತಾನೆ ಎಂದರೆ ಸಾಕ್ಷಿಯು ನಾನು ಪಹಣಿಯನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳ ಪಹಣಿಗಳು 2 ನೇ ಪ್ರತಿವಾದಿಯ ಹೆಸರಿನಲ್ಲಿಯೇ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1991 ರ ನಂತರ ಆತನ ಹೆಸರಿನಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾನೆ. ನಾನು ದಾವಾ ಆಸ್ತಿಗಳ ಪಹಣಿಗಳನ್ನು ನೋಡಿರುತ್ತೇನೆ, ಸದರಿ ಪಹಣಿಗಳಲ್ಲಿ 2 ನೇ ಪ್ರತಿವಾದಿಯ ಹೆಸರು ದಾಖಲಿದ್ದು, ಸದರಿ ವಿಷಯ ಗೊತ್ತಿದ್ದರೂ ಸಹಿತ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿಯಾಗಲೀ, ಅವರ ಮಕ್ಕಳಾಗಲೀ ದಾವಾ ಆಸ್ತಿಗಳ ಕಬ್ಜೆದಾರರು ಮತ್ತು ಮಾಲೀಕರು ಅಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.